**CW : 11**

PW : 5

# ಹೆಚ್ಚುವರಿ ಹಿರಿಯ ವ್ಯವಹಾರಿಕ ನ್ಯಾಯಾಧೀಶರು ಮತ್ತು ಹೆಚ್ಚುವರಿ ಮುಖ್ಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಪುತ್ತೂರು, ದ.ಕ.

# CC No.1100/2023

| | | |
|---|---|---|
| ಸಾಕ್ಷಿದಾರರ ಹೆಸರು | : | ಅಹಮದ್ ಅವೀಜ್ |
| ತಂದೆಯ ಹೆಸರು | : | ಫಕ್ರುದ್ದೀನ್ |
| ಪ್ರಾಯ | : | 49 ವರ್ಷ |
| ಉದ್ಯೋಗ | | ವ್ಯಾಪಾರ |
| ವಾಸಸ್ಥಳ | : | ಬಿ ಸಿ ರೋಡ್, ಬಂಟ್ವಾಳ ತಾ. |

ದಿನಾಂಕಃ**22.01.2026** ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯವಿಚಾರಣೆಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ

ಆರೋಪಿಯ ಪರಿಚಯ ಇದೆ. ನನ್ನ ಮಾಲಿಕತ್ವದ ಇಕೋ ಕಾರು ಇದೆ. ಅದರ ನೊಂದಣಿ ಸಂ. ಸರಿಯಾಗಿ ಗೊತ್ತಿಲ್ಲ. ದಿ. 23-9-23 ರಂದು ನನಗೆ ಸೇರಿದ ವಾಹನ ಯಾರ ಸ್ವಾಧೀನದಲ್ಲಿ ಇತ್ತು ಎಂದು ಗೊತ್ತಿಲ್ಲ. ಸುಮಾರು 1 ವರೆ ವರ್ಷಗಳ ಹಿಂದೆ ಪೋ ಠಾಣೆಯಿಂದ ನನಗೆ ಕರೆ ಬಂದಿತ್ತು ಸದರಿ ಕರೆಯಲಪ್ಲಿ ನಿಮಗೆ ಸೇರಿದ ಕಾರು ಅಪಘಾತವಾಗಿ ನಮ್ಮ ವಶದಲ್ಲಿದೆ ಅದನ್ನು ಬಿಡಿಸಿಕೊಳ್ಳಿ ಎಂದು ಪೊಲೀಸರು ತಿಳಿಸಿದರು. ನಾನು ಪೋ ಠಾಣೆಗೆ ಹೋಗಿ ಸಹಿ ಮಾಡಿ ಕಾರನ್ನು ನನ್ನ ವಶ ಪಡೆದಿದ್ದೇನೆ. ಸಾಕ್ಷಿಯು ನಷ್ಟಭರ್ತಿ ಬಾಂಡ್ ಮೇಲಿನ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು ನಷ್ಟಭರ್ತಿ ಬಾಂಡ್ ನ್ನು ನಿಪಿ-5 ಎಂದು ಹಾಗೂ ಅದರಲ್ಲಿನ ಸಾಕ್ಷಿಯ ಸಹಿಯನ್ನು ನಿಪಿ.5ಎ ಎಂದು ಗುರುತಿಸಲಾಯಿತು. ನನ್ನ ವಾಹನದ ಭಾವಚಿತ್ರ ನೋಡಿದರೆ ಗುುರುತಿಸಬಲ್ಲೆ. ಸಾಕ್ಷಿಯು ನಿಪಿ-1 ರಲ್ಲಿ ಕಾಣುವ ಕಾರನ್ನು ನೋಡಿ ಗುರುತಿಸಿರುತ್ತಾರೆ.

**(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು ಃ ಅನುಮತಿ ನೀಡಲಾಯಿತು)**

**ಪಾಟೀ ಸವಾಲುಃ ಸ.ಸ.ಅ. ರವರಿಂದಃ**

ದಿ. 1-10-23 ರಂದು ಪೊಲೀಸ್ ನಿರೀಕ್ಷಕರು ಪುತ್ತೂರು ಗ್ರಾಮಾಂತರ ಪೋ ಠಾಣೆಯವರು ಕಲಂ 133 ಎಮ್ ವಿ ಕಾಯಿದೆ ಪ್ರಕಾರ ನೋಟೀಸ್ ಜಾರಿಗೊಳಿಸಿದ್ದು ಅದಕ್ಕೆ ಸಂಬಂಧಿಸಿದಂತೆ ನಾನು ಪೊ ಠಾಣೆಗೆ ಹಾಜರಾಗಿ ಅದೇ ದಿನ ನೋಟೀಸಿಗೆ ಉತ್ತರವನ್ನು ಕೊಟ್ಟಿದ್ದೆನು ಎಂದರ ಸರಿಯಲ್ಲ. ನಾನು ನೀಡಿದ ಉತ್ತರದಲ್ಲಿ ಅಪಘಾತ ಸಮಯ ನನಗೆ ಸೇರಿದ ಕೆಎ-19-ಎಮ್ಜಿ-5294 ನೊಂದಣಿ ಸಂ. ಯ ಇಕೋ ಕಾರು ಆರೋಪಿಯ ವಶದಲ್ಲಿತ್ತು ಎಂದು ತಿಳಿಸಿದ್ದೆನು ಎಂದರೆ ಸುಳ್ಳು. ದಿ.23-9-23 ರಂದು ಅಪಘಾತ ಕಾಲದಲ್ಲಿ ಅಪಪಘಾತಪಡಿಸಿದ ನನ್ನ ಮಾಲಿಕತ್ವದ ಕಾರು ಆರೋಪಿಯ ವಶದಲ್ಲಿ ಇದ್ದುದು ಗೊತ್ತಿದ್ದರೂ ಕೂಡಾ ಆತನನ್ನು ಶಿಕ್ಷೆಯಿಂದ ರಕ್ಷಿಸುವ ಸಲುವಾಗಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲುಃಆರೋಪಿತರ ಪರ ವಕೀಲರಿಂದಃ

ಏನೂ ಇರುವುದಿಲ್ಲ.

ಮರುವಿಚಾರಣೆ ಇಲ್ಲ.

ನನ್ನ ಉಕ್ತಲೇಖನದ ರೀತ್ಯ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸರಿ.ಇದೆ.

ಹೆಚ್ಚುವರಿ ಹಿರಿಯ ವ್ಯವಹಾರಿಕ ನ್ಯಾಯಾಧೀಶರು,
ಮತ್ತು ಜೆಎಂಎಫ್‌ಸಿ, ಪುತ್ತೂರು, ದ.ಕ.

**CW : 11**

PW : 5